


## ತಂಬಾಕಿನ ಸಸಿಯಿಂದ ಲಸಿಕೆ!

ತಂಬಾಕು ಸೇವನೆ ಅಪಾಯಕಾರಿ ಎಂಬ ಎಚ್ಚರಿಕೆ ಮಾತು ಕೇಳದ ಕಿವಿ ಇರಲಾರದು. ಆದರೆ, ಅದೇ ತಂಬಾಕಿನ ಸಸಿ ಜೀವ ರಕ್ಷಕ! ಅಂದರೆ ಆಶ್ಚರ್ಯ ಅಲ್ಲವೆ? ಹೌದು, ತಂಬಾಕು ಪ್ರತಿವರ್ಷ ಲಂಕ್ಷಾಂತರ ಜನರನ್ನು ವಿಶ್ವದಾದ್ಯಂತ ಬಲಿ ತೆಗೆದುಕೊಳ್ಳುತ್ತದೆ. ಅಷ್ಟೊಂದು ಅಪಾಯಕಾರಿಯಾದ ತಂಬಾಕಿನ ಗಿಡವನ್ನು ಬಳಸಿಯೇ ಯಕೃತ್ ಹಾಗೂ ಶ್ವಾಸಕೋಶ ಸಂಬಂಧಿ ಸೋಂಕು ರೋಗದ ತಡೆಗೆ ಲಸಿಕೆಯನ್ನು ಅಮೆರಿಕದ ವಿಜ್ಞಾನಿಗಳು ತಯಾರಿಸಿದ್ದಾರೆ.

ಜೈವಿಕ ವಿಜ್ಞಾನಿಗಳು ತಂಬಾಕಿನ ಸಸಿಯಿಂದ ತಯಾರಿಸಿರುವ 'ಸ್ವಿಫ್ಟ್‌ವಾಕ್ಸ್' ಎಂಬ ಲಸಿಕೆ ವೈದ್ಯಕೀಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಲಿದೆ. ಇದು ಸೋಂಕು ಪೀಡಿತ ಕಾಯಿಲೆ ತಡೆಯುವಲ್ಲಿ ಕ್ರಾಂತಿಯನ್ನೇ ಮಾಡಲಿದೆ. ಇದರ ಉತ್ಪಾದನೆ ಕೂಡ ಹೆಚ್ಚಿನ ಖರ್ಚು ಬಯಸುವುದಿಲ್ಲ ಎಂದು ಸಂಶೋಧಕರು ತಮ್ಮ ಅಭಿಪ್ರಾಯವನ್ನು ದಾಖಲಿಸಿದ್ದಾರೆ.

ಹೊಸದಾಗಿ ಆವಿಷ್ಕರಿಸಿರುವ ಈ ಲಸಿಕೆಯನ್ನು ಕೋಳಿಗಳ ಮೇಲೆ ಪ್ರಯೋಗಿಸಲಾಗಿದೆ. ಫಲಿತಾಂಶ ಸಂಶೋಧಕರ ಊಹೆಯಂತೆ ಯಶಸ್ವಿಯಾಗಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತವಾಗಲಿದೆ ಎನ್ನುತ್ತಾರೆ ಸಂಶೋಧನಾ ತಂಡದ ಮುಖ್ಯಸ್ಥ ಅರ್ನ್ಜೊಲಾ.

## ಹೃದಯಾಘಾತ ತಿಳಿಯಲು ಅಗ್ಗದ ಪರೀಕ್ಷೆ

ಹೃದಯಕ್ಕೆ ಆಘಾತ ಆಗುತ್ತದೆ ಎಂದು ಮೂರು ವಾರದ ಮೊದಲೇ ತಿಳಿಯಬಹುದು! ಈ ವಿಷಯವನ್ನು ಕ್ಯಾಲಿಫೋರ್ನಿಯಾದ ಸಂಶೋಧನಾ ಸಂಸ್ಥೆ ಕಂಡು ಹಿಡಿದಿದೆ. ಒಂದು ರಕ್ತದ ಪರೀಕ್ಷೆಯಿಂದ ಸುಮಾರು ಇಪ್ಪತ್ತು ದಿನಗಳ ಮೊದಲೇ ಹೃದಯಾಘಾತದ ಮುನ್ಸೂಚನೆಯನ್ನು ತಿಳಿಯಬಹುದು ಎನ್ನುವುದು ಅವರ ವಾದ. ಇದು ಅಗ್ಗದಲ್ಲಿ ನಡೆಯುವ ಪರೀಕ್ಷೆ ಎಂದೂ ಸಂಶೋಧನಾ ತಜ್ಞರು ಹೇಳಿದ್ದಾರೆ. ನೂತನ ಸಂಶೋಧನೆಯ ಫಲ ಮುಂದಿನ ವರ್ಷದ ಅವಧಿಗೆ ಸಾರ್ವಜನಿಕರಿಗೆ ಲಭ್ಯವಾಗಲಿದೆ. ಈ ಪರೀಕ್ಷೆಗೆ ಅಂದಾಜು ಐದು ಸಾವಿರ ರೂಪಾಯಿ ತಗುಲುತ್ತದೆ. ಇದರಿಂದ ಮರಣಾಪಾಯದಿಂದ ಹೃದಯ ರೋಗಿಯನ್ನು ರಕ್ಷಿಸಬಹುದು ಎಂದು ಸಂಶೋಧಕರು ಹೇಳಿದ್ದಾರೆ.



## ಪಾರ್ಕಿನ್ಸನ್‌ಗೆ ಅರಿಶಿಣ ಮದ್ದು!

'ಪಾರ್ಕಿನ್ಸನ್' (ನರರೋಗದ ಒಂದು ಬಗೆ) ತೊಂದರೆಗೆ ಭಾರತೀಯ ಜನಪದ ವೈದ್ಯಪದ್ಧತಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಅರಿಶಿಣ ಔಷಧವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅಮೆರಿಕಾದ ಮಿಚಿಗನ್ ವಿಶ್ವವಿದ್ಯಾಲಯದ ಸಂಶೋಧಕರು ಹೇಳಿದ್ದಾರೆ.

ದೈಹಿಕ ಸಾಮರ್ಥ್ಯವನ್ನೇ ಕುಂದಿಸಿ ನಿತ್ರಾಣಗೊಳಿಸುವ ಈ ಕಾಯಿಲೆಯನ್ನು ತಡೆಯಲು ಅರಿಶಿಣ ಪರಿಣಾಮಕಾರಿ ಔಷಧ ಎಂದು ಸಂಶೋಧಕರಲ್ಲಿ ಒಬ್ಬರಾದ ಬಶೀರ್ ಅಭಿಪ್ರಾಯಪಟ್ಟಿದ್ದಾರೆ.

ಪಾರ್ಕಿನ್ಸನ್ ಮಿದುಳಿನ ಮೇಲೆ ಪರಿಣಾಮ ಬೀರುವ ವ್ಯಾಧಿ. ಇದು ತನ್ನ ಪ್ರಾಬಲ್ಯವನ್ನು ಸಾಧಿಸುತ್ತಾ ಒಂದು ದಿನ ಮೆದುಳು ನಿಷ್ಕ್ರಿಯಗೊಳ್ಳುತ್ತದೆ. ನಂತರ ರೋಗಿ ಸಹಜವಾಗಿ ಸಾಯುತ್ತಾನೆ. ವಿಶ್ವವ್ಯಾಪಿ ಸುಮಾರು 40ಲಕ್ಷ ಜನ ಈ ಕಾಯಿಲೆಯಿಂದ ಬಳಲುತ್ತಿದ್ದಾರೆ.

ಮೊದಲು ಹಾನಿಗೊಳಗಾದ ಮೆದುಳಿನ ಭಾಗವನ್ನು ಕ್ರಿಯಾಶೀಲಗೊಳಿಸಲು ಬೇಕಾಗುವ ಪ್ರೊಟೀನ್ ತಲುಪಿಸಬೇಕು. ನಂತರ ಔಷಧದ ಉಪಚಾರವನ್ನು ಮಾಡಬೇಕು. ಅಪಾರ ಔಷಧೀಯ ಗುಣ ಹೊಂದಿರುವ ಅರಿಶಿಣ ಪಾರ್ಕಿನ್ಸನ್ ಗುಣಪಡಿಸಲು ಸಹಕಾರಿ ಎಂಬುದನ್ನು ಸಂಶೋಧಕರು ಸ್ಪಷ್ಟಪಡಿಸಿದ್ದಾರೆ.

–ಟಿಪ್ಸ್